# ‘ಪೂರ್ವಸೂರಿಗಳನ್ನು ನೆನಪಿಸಿಕೊಳ್ಳೋಣ..

**ಡಾ.ರಾಜ್ ಅವರಿಗೆ ನಾಯಕಿ ಆಗುವುದರಿಂದ ಹಿಡಿದು, ಇತ್ತೀಚಿನ ಹೊಸ ಹೀರೋಗಳ ಜತೆಗೂ ಅಭಿನಯಿಸಿರುವ ಜಯಮಾಲ, ಕನ್ನಡ ಚಿತ್ರರಂಗ ಕಂಡ ಅನುಪಮ ನಟಿ ಮಾತ್ರವಲ್ಲ, ರಾಷ್ಟ್ರಪ್ರಶಸ್ತಿ ವಿಜೇತ ನಿರ್ಮಾಪಕಿಯೂ ಹೌದು. ಚಲನಚಿತ್ರ ವಾಣಿಜ್ಯ ಮಂಡಳಿಯ ಅಧ್ಯಕ್ಷರಾಗಿ, ವಿಧಾನ ಪರಿಷತ್ತಿನ ಸದಸ್ಯೆಯಾಗಿ ಚಿತ್ರೋದ್ಯಮಕ್ಕೆ ಮಹತ್ವದ ಕೊಡುಗೆ ನೀಡಿರುವ ಅವರು, ಉದ್ಯಮದ ಇದುವರೆಗಿನ ಏಳುಬೀಳುಗಳ ಹಾದಿಯ ಕಡೆಗೆ ಇಲ್ಲಿ ಒಂದು ವಿಶಿಷ್ಟ ನೋಟ ಬೀರಿದ್ದಾರೆ. ಅವರ ಮಾತುಗಳಲ್ಲೇ ಓದಿ:**

**★ ನಿರೂಪಣೆ: ಬಿ.ಎಂ. ಹನೀಫ್**

‘ಮೂಕಿಯನ್ನು ಬಿಟ್ಟುಬಿಡೋಣ. ವಾಕ್‌ಚಿತ್ರಕ್ಕೆ ಬರೋಣ. 1934ರಿಂದ ಸತಿ ಸುಲೋಚನಾದಿಂದ ಲೆಕ್ಕ ಹಿಡಿದು ನೋಡುತ್ತಾ ಹೋದರೆ, ಆಗ ತಾನೆ ರಂಗಭೂಮಿ ಬೆಳೆದು ನಿಂತಿತ್ತು– ಅದರ ಮಧ್ಯೆ ಹೊಸದಾಗಿ ಬಂದಂತಹ ಸಿನಿಮಾ– ಜನರಲ್ಲಿ ಇದ್ದಂತಹ ವಿಸ್ಮಯ, ಸಿನಿಮಾವನ್ನು ಸ್ವೀಕರಿಸಿದ ರೀತಿ ನೆನಪಿಸಿಕೊಳ್ಳಿ. ಅದಾಗಲೇ ಹಿಂದಿಯ, ತೆಲುಗಿನ ಮೊದಲ ಸಿನಿಮಾಗಳನ್ನು ಜನ ನಮ್ಮಲ್ಲೂ ನೋಡಿದ್ದರು. ಆದರೆ ಬಳಿಕ ಕನ್ನಡದಲ್ಲಿ ಬಂತಲ್ಲ... ನಮ್ಮ ಭಾಷೆಯಲ್ಲಿ ಆ ಹೊಸತನ್ನು ಬೆರಗಿನಿಂದ ನೋಡಿದ, ಸ್ವೀಕರಿಸಿದ ಮನಸ್ಸುಗಳನ್ನು ನಾವು ಈಗ ನೆನಪಿಸಿಕೊಳ್ಳಬೇಕು.

ಆಗೆಲ್ಲ ಈಗಿನಂತೆ ಸರಾಗವಾಗಿ ಸಿನಿಮಾಗಳು ಬರಲಿಲ್ಲ. ನಡುನಡುವೆ ವರ್ಷಕ್ಕೆ ಒಂದು, ಎರಡು ಸಿನಿಮಾಗಳು. ಅದರಲ್ಲೂ ಎರಡನೇ ವಿಶ್ವಯುದ್ಧ ನಡೆದಾಗ ಮೂರು ವರ್ಷ ಸಿನಿಮಾನೇ ಬರಲಿಲ್ಲ. ಈಗ ಸುಲಭ. ಆಗ ಹಣ ಹೂಡುವವರು ಬರಬೇಕಲ್ಲ? ಹೊಸ ಟೆಕ್ನಾಲಜಿ ಬೇರೆ, ಕನ್ನಡದ ಒಂದು ಅಭಿರುಚಿಯೂ ಇರಬೇಕು. ರಂಗಭೂಮಿಯಲ್ಲಿ ಅಭಿರುಚಿ ಇದ್ದವರು ಮುಂದೆ ಬಂದರು. ಸಿನಿಮಾ ಕಲೆಯನ್ನು ಬೆಳೆಸಿದರೆ ತಮಗೂ ಒಂದು ವೃತ್ತಿ ಸಿಗುತ್ತದೆ, ತಾವೂ ಬೆಳೆಯಬಹುದು ಎಂಬ ಆಸೆಯೂ ಇತ್ತು. ಚಿತ್ರ ಮಂದಿರಗಳ, ಪ್ರಚಾರದ ಕೊರತೆಯನ್ನೂ ಆರಂಭದವರು ಎದುರಿಸಿದರು. ಅದೆಲ್ಲವನ್ನೂ ಎದುರಿಸಿ ಹಣ ಹೊಂದಿಸಿ ತಂತ್ರಜ್ಞಾನದ ಕೊರತೆಗಳ ಮಧ್ಯೆಯೂ ನಮ್ಮ ಸಿನಿಮಾ ಉದ್ಯಮಕ್ಕೆ ಒಂದು ಭದ್ರ ಬುನಾದಿ ಹಾಕಿದವರನ್ನು ಇವತ್ತು ನಾವು ನೆನಪಿಸಿಕೊಳ್ಳಬೇಕು. ರಂಗಭೂಮಿಯಿಂದ ಸಿನಿಮಾಕ್ಕೆ ಬಂದಾಗಲೂ ಎಲ್ಲವೂ ಸುಲಭವಾಗಿರಲಿಲ್ಲ. ರಂಗಭೂಮಿಯ ಅಭಿನಯದ ಪರಿಸ್ಥಿತಿಯೇ ಬೇರೆ, ಸಿನಿಮಾದ ಟೆಂಪೊ ಬೇರೆ. ನಟಿಯೊಬ್ಬಳಿಗೆ ಕಣ್ಣೀರು ಬರಲಿಲ್ಲ ಎಂದಾಗ ಸಿನಿಮಾ ಶೂಟಿಂಗ್‌ನಲ್ಲಿ ಕಣ್ಣಿಗೆ ಮೆಣಸಿನಕಾಯಿ ನುರಿದು ಕಣ್ಣೀರು ಬರಿಸಿದ್ದೂ ಇದೆ! ಕೆಲವು ಸಿನಿಮಾಗಳಲ್ಲಿ ಆರಂಭದಲ್ಲಿ ಅವಕಾಶ ಸಿಕ್ಕಿದಾಗ ಸಿನಿಮಾದ ವಿಧಾನಕ್ಕೆ ಹೊಂದಿಕೊಳ್ಳಲಾಗದೆ ಮರಳಿ ಹೋದವರೂ ಇದ್ದಾರೆ. ಹೊಸ ತಂತ್ರಜ್ಞಾನದ ಕುತೂಹಲ, ನಟನೆಯ ಒತ್ತಡ ಎಲ್ಲವೂ ಇಲ್ಲಿ ವಿಭಿನ್ನವಾಗಿತ್ತು. ಅದನ್ನು ಗ್ರಹಿಸಲಾಗದೆ ಓಡಿಹೋದವರೂ ಇದ್ದಾರೆ.

ಎಂತೆಂತಹ ಸಿನಿಮಾಗಳು ಆಗ ಬಂದವು! ವಿಠಲಾಚಾರ್ಯರ ಸಾಹಸಗಳನ್ನೇ ಗಮನಿಸಿ. ರತ್ನಗಿರಿ ರಹಸ್ಯ ದಲ್ಲಿ ಲಕ್ಷ್ಮೀದೇವಿಯ ರುಂಡ ಒಂದು ಕಡೆ, ಮುಂಡ ಒಂದು ಕಡೆ, ಮದುವೆ ಆಗೋದು ಯಾವ ಕಡೆ– ಎನ್ನುವ ಸಂಭಾಷಣೆಯ ದೃಶ್ಯ. ಒಂದೇ ಒಂದು ಕ್ಯಾಮೆರಾ ಇಟ್ಟುಕೊಂಡು ಇಂತಹ ದೃಶ್ಯಗಳನ್ನು ಚಿತ್ರೀಕರಿಸಿದ್ದು ದೊಡ್ಡ ಸಾಹಸವೇ. ಅತ್ಯಂತ ಕನಿಷ್ಟ ಸೌಲಭ್ಯಗಳು ಇದ್ದ ಆ ಕಾಲದಲ್ಲಿ ಇವತ್ತಿಗೂ ನಾವು ಬೆರಗಿನಿಂದ ನೋಡಬಹುದಾದಂತಹ ಸಿನಿಮಾಗಳನ್ನು ಕೊಟ್ಟರು. ಕಪ್ಪು– ಬಿಳುಪು ಸಿನಿಮಾಗಳಲ್ಲಿ ಕಲಾವಿದರ ಮುಖಭಾವಗಳನ್ನು ಎಲ್ಲ ವೀಕ್ಷಕರಿಗೆ ತಲುಪುವಂತೆ ಮಾಡಲು ಎಷ್ಟೊಂದು ಕಷ್ಟ ಪಡಬೇಕಾಗಿತ್ತು.

ಮೂಕಿ ಬಳಿಕ ಟಾಕಿ ಬಂದಾಗ, ಶಬ್ದ ಬಂದದ್ದೇ ಒಂದು ಒಂದು ದೊಡ್ಡ ಪವಾಡ. ಅದನ್ನೂ ಬೆರಗಿನಿಂದಲೇ ನಮ್ಮ ಪ್ರೇಕ್ಷಕರು ಸ್ವೀಕರಿಸಿದರು. ಭಕ್ತ ಧ್ರುವ ಸಿನಿಮಾದಲ್ಲಿ ತೆರೆಯ ಮೇಲೆ ಹುಲಿ ಬಂದು ಕುಳಿತು ಮುಂದಕ್ಕೆ ಬಾಗಿದಾಗ ಥಿಯೇಟರಿನಿಂದ ಜನ ಎದ್ದು ಓಡಿ ಹೋದರಂತಲ್ಲ... ಆ ಘಟನೆಗಳನ್ನು ನೆನಪಿಸಿಕೊಳ್ಳಿ. ಈಗ ನಗು ಬರುತ್ತೆ, ಆದರೆ ಆಗ ಹೊಸ ತಂತ್ರಜ್ಞಾನಕ್ಕೆ ಸಿಕ್ಕಿದ ಪ್ರತಿಕ್ರಿಯೆ ಅದ್ಭುತವಾದದ್ದು.

ಮೊದಲು ಶೂಟಿಂಗಿಗೆ ಕೊಲ್ಹಾಪುರಕ್ಕೆ ಹೋಗಬೇಕಿತ್ತು. ಬಳಿಕ ಚೆನ್ನೈ ನಲ್ಲಿ ಸೌಲಭ್ಯಗಳಾದವು. ಆ ಬಳಿಕ ಮೈಸೂರು. ಒಂದು ಕಾಲದಲ್ಲಿ ಏಳು ಸಿನಿಮಾಗಳು ಚೆನ್ನೈನಲ್ಲಾದರೆ, ಇನ್ನು ಏಳು ಸಿನಿಮಾಗಳು ಮೈಸೂರಿನಲ್ಲಿ ಆಗುತ್ತಿದ್ದವು. ಮೈಸೂರಿನಲ್ಲಿ ನವಜ್ಯೋತಿ ಸ್ಟುಡಿಯೋ, ಬಳಿಕ ಪ್ರೀಮಿಯರ್ ಸ್ಟುಡಿಯೋ. ಎಲ್ಲವನ್ನು ಕಟ್ಟುವಾಗ ನಮ್ಮವರು ಎಷ್ಟೊಂದು ಕಷ್ಟಪಟ್ಟಿದ್ದಾರೆ ಎನ್ನುವುದು ಇವತ್ತು ನಮಗೆ ಅರಿವಿಗೆ ಬರುವುದಿಲ್ಲ. ಆದರೆ ಅವತ್ತು ಮೈಸೂರು ನಮ್ಮವರಿಗೆ ಆಕರ್ಷಣೆಯ ಕೇಂದ್ರ ಆಗಿದ್ದುದು ಸುಳ್ಳಲ್ಲ. ಹೊರಗಿನಿಂದಲೂ ಕಲಾವಿದರು ಮೈಸೂರಿಗೆ ಬಂದು ಚಿತ್ರೀಕರಣ ನಡೆಸಿದರು. ಅಲ್ಲಿದ್ದ ಹೊರಾಂಗಣ ಸೌಲಭ್ಯಗಳೂ ಅವರನ್ನು ಕೈಬೀಸಿ ಕರೆದವು.

ಆರಂಭದಲ್ಲಿ ಜನರಿಗೆ ಗೊತ್ತಿದ್ದ ಕಥೆಗಳೇ, ಅದರಲ್ಲೂ ಭಕ್ತಿಪ್ರಧಾನ ಚಿತ್ರಗಳು. ಆಗಿನ ನಮ್ಮ ಪ್ರೇಕ್ಷಕರ ಬುನಾದಿಯನ್ನು ಕಟ್ಟುವಲ್ಲಿ ಈ ಚಿತ್ರಗಳು ಮಹತ್ವದ ಪಾತ್ರ ವಹಿಸಿವೆ. ಬಳಿಕ ನಿಧಾನಕ್ಕೆ ಸಾಮಾಜಿಕ ಕಥೆಗಳುಳ್ಳ ಚಿತ್ರಗಳು ಬಂದವು. ಬಾಂಡ್ ಸಿನಿಮಾಗಳು, ಹೊಸ ಅಲೆಯ ಚಿತ್ರಗಳು... ದೇಶದಲ್ಲಿ ಏನೆಲ್ಲ ನಡೆಯುತ್ತಿತ್ತೋ ಅದನ್ನು ನಾವೂ ತಕ್ಷಣಕ್ಕೆ ಸ್ವೀಕರಿಸಿ ಆ ಮಾದರಿಗೆ ಹೊರಳುತ್ತಾ ಬಂದೆವು.

